**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. :2600/2019** **ದಿನಾಂಕ: 02.06.2026**

**ಸಿ ಡಬ್ಲೂ : 2**

**ಪಿ ಡಬ್ಲೂ : 9**

---------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಮಹಾಂತೇಶ ವಿಜಯ ಮಹಾಜನ |
| ಗಂಡ/ ತಂದೆಯ ಹೆಸರು | ವಿಜಯ |
| ವಯಸ್ಸು | 31 ವರ್ಷ |
| ಉದ್ಯೋಗ | ಶೇತ್ಕಿ. |
| ವಾಸಸ್ಥಳ | ಸಾ: ಅವರಕೋಡ |

**<u>ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ಚಾಸಾ 1 ಮತ್ತು 3 ರವರು ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. 2019 ರಲ್ಲಿ ನಾನು ಆಸ್ಪತ್ರೆಗೆ ಹೋದಾಗ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದು ಯಾವ ಕಾರಣಕ್ಕಾಗಿ ಪಡೆದಿದ್ದರು ಅಂತಾ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಪಂಚನಾಮೆ ಆಗಿದ್ದು ಈಗಾಗಲೇ ಅದನ್ನು ನಿಪಿ 4 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 4 ಇ ಅಂತಾ ಗುರುತಿಸಲಾಯಿತು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು: - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ದಿ: 30.04.2019 ರಂದು ರಾತ್ರಿ 9.15 ಗಂಟೆ ಸುಮಾರಿಗೆ ಅಥಣಿ ಪಟ್ಟಣದ ಹದ್ದಿಯಲ್ಲಿ ಹಳೆ ತಹಶೀಲ್ದಾರ ಆಫೀಸ ಮುಂದೆ ಸಾರ್ವಜನಿಕ ಡಾಂಬರ ರಸ್ತೆಯ ಮೇಲೆ ರಸ್ತೆ ಅಪಘಾತವಾಗಿದ್ದು ಆ

ವಿಷಯಕ್ಕೆ ಸಂಬಂದಪಟ್ಟಂತೆ ಸ್ಥಳ ಪಂಚನಾಮೆ ಮಾಡಲು ನನ್ನನ್ನು ಮತ್ತು ಚಾಸಾ 3 ರವರನ್ನು ಪಂಚರೆಂದು ಹಾಜರಿರಲು ಪೊಲೀಸರು ತಿಳಿಸಿದಂತೆ ನಾನು ಮತ್ತು ಚಾಸಾ 3 ರವರು ಸದರಿ ಸ್ಥಳದಲ್ಲಿ ಪಂಚನಾಮೆಗೆ ಹಾಜರಿದ್ದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ದಿಃ 03.05.2019 ರಂದು ಮುಂಜಾನೆ 10.15 ರಿಂದ 11.15 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಸದರಿ ಸ್ಥಳದಲ್ಲಿ ಅಪಘಾತಕ್ಕೀಡಾದ ಮೋಟಾರ ಸೈಕಲ ಸಂಖ್ಯೆ ಕೆ ಎ 23 ಇಪಿ 0269 ನೇದ್ದು ಡ್ಯಾಮೇಜ ಆಗಿದ್ದು ಇನ್ನೊಂದು ಮೊಟಾರ ಸೈಕಲ ನಂಬರ ಕೆ ಎ 23 ಇಕೆ 2041 ಇದ್ದು ಅದನ್ನು ತಾಂತ್ರಿಕ ಪರೀಕ್ಷೆಗೊಸ್ಕರ ತಡೆ ಹಿಡಿದು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನನ್ನ ಮತ್ತು ಚಾಸ 3 ರವರ ಸಮಕ್ಷಮ ಪಂಚನಾಮೆ ಮಾಡಿ ನಿಪಿ 4 ರಂತೆ ಪಂಚನಾಮೆ ಬರೆದು ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ ಪಂಚನಾಮೆಗೆ ನನ್ನ ಮತ್ತು ಚಾಸಾ 3 ರವರ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದ್ದರೂ ಸಹಿತ ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿಃ</u>**

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತನು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾನೆ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.